ಶ್ರೀ ಜಿ.ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಪುತ್ತೂರಿನಲ್ಲಿ ಮಿನಿ ವಿಮಾನ ನಿಲ್ದಾಣ ನಿರ್ಮಿಸಲು ಸರ್ಕಾರ ಉದ್ದೇಶಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಪ್ರವಾಸೋದ್ಯಮ ಯೋಜನೆಗಳ ಅನುಷ್ಠಾನ

816 ಶ್ರೀ ಹ್ಯಾರೀಸ್.ಎನ್.ಎ : ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರ ನೀಡುವುದು;

ಆ) ಸಮುದ್ರ ತೀರಗಳಲ್ಲಿ ಹಾಗೂ ದ್ವೀಪ ಪ್ರದೇಶಗಳಲ್ಲಿ ಪ್ರವಾಸೋದ್ಯಮ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಸಾಕಷ್ಟು ನೈಸರ್ಗಿಕ ಹಾಗೂ ಸೂಕ್ತ ಅವಕಾಶಗಳಿದ್ದರೂ ಸರ್ಕಾರ ಗಮನಹರಿಸದಿರಲು ಕಾರಣಗಳೇನು;

ಇ) ಪ್ರವಾಸೋದ್ಯಮದ ಮೂಲಕ ನಾಗರೀಕರಿಗೆ ಹಾಗೂ ರಾಜ್ಯಕ್ಕೆ ಬಹಳಷ್ಟು ಪ್ರಯೋಜನಗಳು ಒದಗಿಬಂದಿರುವುದರಿಂದ ಇಲಾಖೆಯು ಕಾರ್ಯಚಟುವಟಿಕೆಗಳಿಗೆ ಹೆಚ್ಚಿನ ತೀವ್ರತೆಯನ್ನು ನೀಡಲು ಕ್ರಮಕೈಗೊಳ್ಳುವುದೇ;

ಈ) ರಾಜ್ಯ ಪ್ರವಾಸೋದ್ಯಮ ಇಲಾಖೆಗೆ ಕಳೆದ ಎರಡು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಬಂದ ಅನುದಾನ ಮತ್ತು ಅದರ ವಿನಿಯೋಗದ ಕುರಿತಾದ ವಿವರಗಳೇನು?

ಶ್ರೀ ಜಿ.ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು) :

ಅ) ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಗೋಕರ್ಣ, ಕಾಸರಕೋಡ್, ತ್ರಾಸಿ, ಉಲ್ಲಾಳ, ಸೇಂಟ್‌ಮೇರಿ ದ್ವೀಪ, ಮಲ್ಪೆ, ತಣ್ಣೀರುಬಾವಿ ಹಾಗೂ

ಪಣಂಬೂರು ಕಡಲ ತೀರಗಳನ್ನು ಅಭಿವೃದ್ಧಿ ಪಡಿಸಲು ಮತ್ತು ಸೈನೇಜುಗಳನ್ನು ಅಳವಡಿಸಲು ಕೇಂದ್ರ ಸರ್ಕಾರವು ಒಟ್ಟು ರೂ. 614.40 ಲಕ್ಷಗಳಿಗೆ ಅನುಮೋದನೆ ನೋಡಿ ಮೊದಲ ಕಂತಾಗಿ ರೂ. 209.40 ಲಕ್ಷಗಳನ್ನು ಬಿಡುಗಡೆ ಮಾಡಿರುತ್ತದೆ. ರೂ.29.28 ಲಕ್ಷಗಳ ವೆಚ್ಚದಲ್ಲಿ ಸೈನೇಜುಗಳನ್ನು ಈ ಜಿಲ್ಲೆಗಳಲ್ಲಿ ಅಳವಡಿಸಲಾಗಿದೆ. ಉಳಿದಂತೆ ಕಡಲು ತೀರಗಳ ಬಳಿ ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸಲು ಕ್ರಮವಹಿಸಲಾಗಿದೆ.

ಆ) ಕಡಲು ತೀರ ಹಾಗೂ ದ್ವೀಪಗಳಲ್ಲಿ ಪ್ರವಾಸೋದ್ಯಮ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಮುಖ್ಯವಾಗಿ ಸಿ.ಆರ್.ಝೆಡ್ ನಿಯಮಾವಳಿಗಳ ಅಡಚಣೆ ಇರುತ್ತದೆ. ಇದರಿಂದಾಗಿ ಕಡಲ ತೀರಕ್ಕೆ ಭೇಟಿ ನೀಡುವ ಪ್ರವಾಸಿಗರಿಗೆ ಎಟಕುವಂತೆ ಸೌಲಭ್ಯವನ್ನು ನಿರ್ಮಿಸಲು ಕಷ್ಟಕರವಾಗಿರುತ್ತದೆ.

ಇ) ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಇಲಾಖೆಯ ಕಾರ್ಯ ಚಟುವಟಿಕೆಗಳನ್ನು ತೀವ್ರತೆಯಿಂದ ಹೆಚ್ಚಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಹ ಹೆಚ್ಚಿನ ಅನುದಾನವನ್ನು ಇಲಾಖೆಗೆ ಒದಗಿಸಿವೆ.

ಈ) ರಾಜ್ಯ ಪ್ರವಾಸೋದ್ಯಮ ಇಲಾಖೆಗೆ ಕಳೆದ 2 ವರ್ಷಗಳಲ್ಲಿ ಕೇಂದ್ರದಿಂದ ನೀಡಿದ ಅನುದಾನ ಹಾಗೂ ವಿನಿಯೋಗದ ವಿವರಗಳು ಕೆಳಕಂಡಂತಿವೆ.

ಕ್ರ ಸಂ.	ಯೋಜನೆ	ಬಿಡುಗಡೆಯಾದ ಅನುದಾನ(ಲಕ್ಷಗಳಲ್ಲಿ)	ವಿನಿಯೋಗಿಸಿದ ಅನುದಾನ (ಲಕ್ಷಗಳಲ್ಲಿ)
1	**2007–08:** ಬಿಜಾಪುರ – ಬೀದರ್ – ಗುಲ್ಬರ್ಗಾ ಪ್ರವಾಸಿ ವಲಯದ ಸಮಗ್ರ ಅಭಿವೃದ್ಧಿಗಾಗಿ –	512.78	ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.
2	ಜಂಗಲ್ ಕ್ಯಾಂಪ್ ಮತ್ತು ಟ್ರಯಲ್ಸ್ ಅಭಿವೃದ್ಧಿಗಾಗಿ	283.56	283.56

3	ರಾಜ್ಯದಲ್ಲಿ ಎಕೋ ಸೈಟುಗಳ ಅಭಿವೃದ್ಧಿ	304.20	304.20
4	ಶಿವನಸಮುದ್ರ – ಭರಚುಕ್ಕಿ ಬಳಿ ಪ್ರವಾಸಿ ಸೌಲಭ್ಯ	345.48	50.00
5	ಹಾಸನ ಬಳಿ ಇನ್ಸ್ ಟಿಟ್ಯೂಟ್ ಆಫ್ ಟೂರಿಸಂ ತೆರೆಯಲು	200.00	200.00
6	ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ, ಹನುಮಂತನಗರ	183.53	183.53
1	**2008–09:** ಹಂಪಿಯ ಬಳಿ ಮೆಘಾ ಯೋಜನೆ ಅಡಿಯಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ	1641.79	1506.16
2	ಶಾಂತಿಸಾಗರದ ಬಳಿ ಪ್ರವಾಸಿ ಅಭಿವೃದ್ಧಿಗಾಗಿ	400.00	25.00